ಅಲ್ಲಮಪ್ರಭು ಸಡಗರದಿಂದ ಗೋಕರ್ಣದ ಕಡೆ ಹೊರಟುಬಿಟ್ಟ.

ಮೊದಲಿಗೆ ಮಹಾಬಲೇಶ್ವರನ ದರ್ಶನ ಪಡೆದ ಅಲ್ಲಮಪ್ರಭು ಕೋಟಿತೀರ್ಥದ ರಸ್ತೆಯಲ್ಲಿ ಒಳ್ಳೆಯ ಭಟ್ಟರನ್ನು ಹುಡುಕೋಣವೆಂದು ಆ ಕಡೆ ನಡೆದ. ಗೋಕರ್ಣದಲ್ಲಿ ಆತ್ಮಲಿಂಗ ಈಗ ಇಲ್ಲವೆಂದು, ಅದು ಗೋಕರ್ಣ ಬಿಟ್ಟು ಕಾಶಿಯ ವಿಶ್ವನಾಥನ ಸನ್ನಿಧಿಯನ್ನು ಸೇರಿಕೊಂಡಿದೆಯೆಂದು ಒಂದು ಗುಂಪಿನ ಭಕ್ತಾದಿಗಳು ಮಾತನಾಡಿಕೊಂಡು ಹೋಗುತ್ತಿದ್ದದ್ದು ಅಲ್ಲಮಪ್ರಭುವಿನ ಕಿವಿಗೆ ಬಿದ್ದು ಮುಖದಲ್ಲಿ ನಗು ಮೂಡಿ ಮಾಯವಾಗಿತ್ತು. ಕೋಟಿತೀರ್ಥದ ರಸ್ತೆಯಲ್ಲಿ ಹಾಗೆ ಹೋಗುವಾಗ ಮನೆಯೊಂದರ ಜಗುಲಿಯ ಮೇಲೆ ಕುಳಿತಿದ್ದ ಹಿರಿಯರೊಬ್ಬರು ಅಲ್ಲಮಪ್ರಭುವನ್ನು ನೋಡಿ ಕರೆದಿದ್ದರು. ಅಲ್ಲಮಪ್ರಭು ಹೋಗಿ ಜಗುಲಿಯ ತಣ್ಣನೆಯ ಗಾರೆಯ ಮೇಲೆ ಕುಳಿತಿದ್ದ.

''ಏನು ಸಮಾಚಾರ?'' ಕೇಳಿದ್ದರು ಹಿರಿಯರು. ವಯಸ್ಸು ಎಂಬತ್ತಾದರೂ ಮುಟ್ಟಿರಬೇಕು. ಬರಿ ಕಚ್ಚೆಯುಟ್ಟಿದ್ದ ದೇಹದಲ್ಲಿ ಮೂಳೆಗಳಿಗೆ ನರಗಳು ಸುತ್ತಿಕೊಂಡಂತೆ ಕಾಣುತ್ತಿದ್ದವು. ಅವರು ಹಾಕಿದ್ದ ಜನಿವಾರ ಕೂಡಾ ಶರೀರದೊಳಗಿನ ಒಂದು ನರದಂತೆಯೇ ಕಾಣುತ್ತಿತ್ತು. ಕಣ್ಣುಗಳು ಆಳಕ್ಕೆ ಇಳಿದಿದ್ದರೂ ಪಿಳಿಗುಟ್ಟುತ್ತಿದ್ದವು.

''ಪಿತೃ ಪೂಜೆ ಮಾಡಿಸಬೇಕಿತ್ತು...'' ತೊದಲಿದ್ದ.

''ಹೇ ಮಹಾಬಲೇಶ್ವರ'' ಎಂದು ತೆರೆದ ಬಾಗಿಲಿನ ಕಡೆ ಮುಖ ಮಾಡಿ ಕರೆದಿದ್ದರು. ಕಂಠ ಗಡುಸಾಗಿಯೇ ಇತ್ತು. ಒಂದೇ ನಿಮಿಷದಲ್ಲಿ ಮುಂಬಾಗಿಲಿನಲ್ಲಿ ಅವರ ಮುಖವನ್ನೇ ಹೊತ್ತಿದ್ದ ಸುಮಾರು ಐವತ್ತು ವಯಸ್ಸಿನ ವ್ಯಕ್ತಿ ಪ್ರತ್ಯಕ್ಷವಾಗಿದ್ದರು. ತುಂಡು ಪಂಚೆಯನ್ನುಟ್ಟು ಮಡಿ ಮಾಡಿದಂತೆ ಕಾಣುತ್ತಿದ್ದವರ ದೇಹ ದಷ್ಟಪುಷ್ಟವಾಗಿ ತುಂಬಿಕೊಂಡಿತ್ತು. ಕೈಯಲ್ಲಿ ಅಗಲವಾದ ಎರಡು ಮಣೆ ಹಿಡಿದು ಬಂದವರು ಅಲ್ಲಮಪ್ರಭುವಿನ ಪಕ್ಕ ಒಂದು ಮಣೆಯನ್ನು ಹಾಕಿ ಅದರ ಮೇಲೆ ಕುಳಿತುಕೊಳ್ಳಲು ಹೇಳಿದ್ದರು. ಇನ್ನೊಂದು ಮಣೆಯನ್ನು ಎದುರಿಗೆ ಹಾಕಿ ತಾವು ಕುಳಿದುಕೊಂಡಿದ್ದರು. ಹಿರಿಯರು ''ಈಶ್ವರ'' ಎಂದು ಪಠಿಸುತ್ತಾ ಮನೆಯೊಳಕ್ಕೆ ನಿಧಾನವಾಗಿ ನಡೆದು ಹೋಗಿದ್ದರು. ಎದುರಿಗೆ ಕುಳಿತ ವ್ಯಕ್ತಿ ಒಳಹೋದ ಹಿರಿಯರ ಮಗ ಮಹಾಬಲೇಶ್ವರ ಭಟ್ಟರೆಂಬುದು ಅಲ್ಲಮಪ್ರಭುವಿಗೆ ಹೊಳೆಯದ ವಿಷಯವೇನೂ ಆಗಿರಲಿಲ್ಲ. ಅಲ್ಲಮಪ್ರಭು ನಗು ತೇಲಿಸಿದ್ದ.

''ಹೇಳಿ ಯಾವ ಕಡೆಯವರು...'' ಭಟ್ಟರು ನಕ್ಕಿದ್ದರು. ಸುಮಾರಾಗಿ ಬೆಳೆದಿದ್ದ ಗಡ್ಡದಲ್ಲಿ ಅಲ್ಲಲ್ಲಿ ಬಿಳಿಕೂದಲುಗಳು ಎದ್ದು ಕಾಣುತ್ತಿದ್ದವು.

''ಬನವಾಸಿ...'' ಅಷ್ಟೇ ಹೇಳಿದ್ದ ಅಲ್ಲಮಪ್ರಭು.

''ಹೆಸರೇನು?'' ಕೇಳಿದ್ದರು ಭಟ್ಟರು

''ಅಲ್ಲಮ... ಅಲ್ಲಮಪ್ರಭು...''

''ಶೈವರೋ... ನಿಮ್ಮನ್ನು ನೋಡಿದರೆ ಹಾಗೆನ್ನಿಸುತ್ತಿಲ್ಲ...'' ಮಹಾಬಲೇಶ್ವರ ಭಟ್ಟರು ಅಲ್ಲಮಪ್ರಭುವಿನ ಶರೀರವನ್ನು ಪರೀಕ್ಷಿಸುತ್ತಿದ್ದಂತಿತ್ತು.

''ನನಗೆ ಯಾವ ಪಂಥವೂ ಇಲ್ಲ, ಅಪ್ಪ ಅಲ್ಲಮನ ಭಕ್ತ. ಆ ಕಾಲದಲ್ಲಿ ಬನವಾಸಿಗೆ ಬಂದ ಅಲ್ಲಮಪ್ರಭುವಿಗೆ ನಮ್ಮ ವಂಶದವರು ಒಂದೆರಡು ತಿಂಗಳು ಆಶ್ರಯವನ್ನು ನೀಡಿದ್ದರಂತೆ. ಹಾಗಾಗಿ, ನನಗೆ ಅಲ್ಲಮಪ್ರಭುವೆಂದು ಹೆಸರಿಟ್ಟರಂತೆ...'' ಅಲ್ಲಮಪ್ರಭು ತನಗೆ ತಿಳಿದಿದ್ದ ವಿಷಯವನ್ನು ಮುಚ್ಚುಮರೆಯಿಲ್ಲದೆ ಹೇಳಿದ್ದ.

ಮಹಾಬಲೇಶ್ವರ ಭಟ್ಟರು, ''ಮರೆತಿದ್ದೆ...'' ಎಂದು ಹೇಳಿ ಒಳಹೋದವರು ಎರಡು ನಿಮಿಷದಲ್ಲಿ ಫಳಫಳ ಬೆಳಗಿದ್ದ ಸ್ಟೀಲ್ ಚೆಂಬು ಮತ್ತು ಒಂದು ಸ್ಟೀಲ್ ಲೋಟವನ್ನು ಹಿಡಿದು ಬಂದು ಲೋಟಕ್ಕೆ